

# ದ್ವೀಪಗಳ ಮೇಲೆ ಬರಲಿರುವ ವಿಪತ್ತುಗಳು



## ನುಡಿಯಲ್ಪಟ್ಟ ಪ್ರವಾದನೆ

ದೇವಜನರೊಂದಿಗೆ ನಾವು ದೇವರ ಮಾತಿಗಾಗಿ ಕಾಯ್ದಿದ್ದು ಪ್ರಾರ್ಥಿಸುತ್ತಿದ್ದಾಗ, ನಾನು ಪ್ರತ್ಯೇಕಗೊಂಡು ಇವುಗಳಿಗಾಗಿ ಪ್ರಾರ್ಥಿಸಿದಾಗ ದ್ವೀಪಗಳ ಮೇಲೆಯೂ ಇವುಗಳ ಮೇಲೆ ಬರಲಿರುವ ವಿಪತ್ತುಗಳ ಬಗ್ಗೆಯೂ ದೇವರು ಮಾತಾನಾಡಿ: ದ್ವೀಪಗಳ ಮೇಲೆ ವಿಪತ್ತುಗಳು ಬರಲಿದೆ, ಮುಖ್ಯವಾಗಿ ನಿನ್ನ ದೇಶವನ್ನೊಳಗೊಂಡು ಅಂಟಿಕೊಂಡಿರುವ ದ್ವೀಪಗಳ ಮೇಲೆ ಎಚ್ಚರವಹಿಸಿರಿ, ಅವುಗಳ ಮೇಲೆ ಮಹಾಸಂಕಟಗಳು ಉಂಟಾಗಲಿದೆ. ಅವುಗಳನ್ನು ಒಳಗೊಂಡಿರುವ ಸಮುದ್ರದ ಅಲೆಗಳ ಮೂಲಕ ಸಮುದ್ರವು ಭೋರ್ಗರೆದು ಚಂಡಮಾರುತವೂ, ಘೋರಮಳೆಯೂ ತೀವ್ರಗೊಂಡು ಅನೇಕ ದ್ವೀಪಗಳಿಗೆ ಭಾದೆಯುಂಟಾಗುತ್ತದೆ. ಮುಖ್ಯವಾಗಿ, ಅಂಡಮಾನ್, ನಿಕೋಬರ್ ದ್ವೀಪಗಳ ಮೇಲೆ ಎಚ್ಚರವಹಿಸಿರಿ ಎಂದು ದೇವರು ಹೇಳುತ್ತಾನೆ. ದ್ವೀಪದ ಶಿಲಾಪದರಗಳು ಜರುಗಿ, ಅದರ ಭೂಭಾಗಗಳು ಸರಿದು, ಅದರ ನಿಮಿತ ಅನೇಕ ಅನಾಹುತಗಳು ಉಂಟಾಗುತ್ತದೆ. ಕೆಲ ಕಂಪನದಿಂದ ಗಾಳಿರಭಸವಾಗಿ ಬಡಿದು, ಸಮುದ್ರವು ಭೋರ್ಗರೆದು ಬೃಹತ್ ಅಲೆಗಳು ಏಳುವದರಿಂದ ದ್ವೀಪಗಳು ನಾಶವಾಗುತ್ತವೆ. ಜನರು ಹರಡಿಕೊಂಡಿರುವ ಸ್ಥಳಗಳ ಮೇಲೆ ಇಂಥ ಅನಾಹುತಗಳು ಉಂಟಾಗುವದರಿಂದ ಬಹು ಜನರು ಚದರಿ, ತಮ್ಮ ಜೀವನಾಧಾರವನ್ನು ಕಳಕೊಂಡು, ಇಗೋ, ನಾವು ವಾಸಿಸುತ್ತಿರುವ ಭಾಗ ನಮ್ಮ ಜೀವನಕ್ಕೆ ತಕ್ಕದ್ದಲ್ಲವೆಂದು ಹೇಳುವಂತಹ ಮಹಾಘೋರ ಸಂಭವಗಳು ಮುಂಬರುವ ದಿನಗಳಲ್ಲಿ ನಡೆಯುವಂತದ್ದನ್ನು ನೀವು ನೋಡುವಿರಿ. ಅವು ಮತ್ತೂ ಹೆಚ್ಚಾಗುವದರಿಂದ, ಅದನ್ನು ಅಂಟಿಕೊಂಡಿರುವ ದ್ವೀಪಗಳಲ್ಲಿ ಕೆಲವೊಂದು ನೀರಿನೊಳಗೆ ಮುಳುಗಿಹೋಗುತ್ತದೆ. ಕಾಡುಜನರು ವಾಸವಿರುವ ಕೆಲವು ದ್ವೀಪಗಳು ಮಾಯವಾಗಿ ಹೋಗುತ್ತವೆ. ಅಂಡಮಾನ್ ದ್ವೀಪಗಳ ಭಾಗದಲ್ಲಿ ನನ್ನ ಚಿತ್ತವನ್ನು ನೆರವೇರಿಸುವ ಜನರು ಇರುವವರಾಗಿದ್ದಾರೆ. ಅವರುಗಳನ್ನು ಕಂಡುಹಿಡಿದು ಅವರಿಗೆ ಕಾರ್ಯಗಳನ್ನು ಪ್ರಕಟಿಸಿ ತಾವು ವಾಸಿಸುತ್ತಿರುವ ಭಾಗಗಳಿಗಾಗಿ ಜವಬ್ದಾರಿವಹಿಸುವದಕ್ಕೂ, ದ್ವೀಪಗಳು ರಕ್ಷಿಸಲ್ಪಡುವದಕ್ಕೂ ಅವುಗಳಿಗಾಗಿ ಒಡಕಿನಲ್ಲಿ ನಿಲ್ಲುವದಕ್ಕೂ ಅರುಹಿರಿ. ಇಗೋ, ಈ ದ್ವೀಪಗಳು ನನಗಾಗಿ ಕಾರ್ಯಗಳನ್ನು ಮಾಡುವದಕ್ಕೂ, ನನ್ನ ಉಜ್ಜೀವನವನ್ನು ಹೊತ್ತುಸಹಿಸುವದಕ್ಕೂ ಮುಂದಾಗಿ ಆರಿಸಲ್ಪಟ್ಟಿದೆ. ಕಾಲಕ್ಕೆ ಮುಂಚಿತವಾಗಿ ಅದರ ಮೇಲೆ ಕೇಡನ್ನು ಬಿಚ್ಚಿಬಿಡಲಿಕ್ಕಾಗುವಂತೆ ಜನರನ್ನು ಪಾಪಕ್ಕೆ ಒಳಪಡಿಸುವಂತೆಯೂ, ಉದಾಸೀನತೆಪಡಿವದಕ್ಕೂ ಸೈತಾನನು ಕಾರ್ಯಮಾಡುತ್ತಾನೆ. ಕಾಲಕ್ಕೂ ಮುಂಚೆ ಕೇಡುಗಳು ದ್ವೀಪಗಳನ್ನು ಮುಟ್ಟಬಿಡದಂತೆ ನಿಮ್ಮ ಕೈಗಳನ್ನು ಮೇಲಕ್ಕೆತ್ತಿ, ಒಡಕಿನಲ್ಲಿ ನಿಂತ್ತು ನೀವು ಇವುಗಳಿಗಾಗಿ ಜವಾಬ್ದಾರಿವಹಿಸಿ ಪ್ರಾರ್ಥಿಸಿದರೆ ನಾನು ಅವುಗಳನ್ನು ಸಂರಕ್ಷಿಸುವೆನು. ಮತ್ತೂ, ಅಂಡಮಾನ್ ದ್ವೀಪಗಳಲ್ಲಿ ಮಾತ್ರವಲ್ಲದೆ, ಸಮುದ್ರವನ್ನೊಳಗೊಂಡ ಎಲ್ಲಾ ದ್ವೀಪಗಳ ಮೇಲೆಯೂ ಇಂಥಹ ಘೋರಕೃತ್ಯಗಳು ಮುಂಬರುವ ದಿನಗಳಲ್ಲಿ ಬಿಚ್ಚಿಬಿಡಲಾಗುತ್ತದೆ. ನೀವೋ, ನಿಮ್ಮ ದೇಶದ ಸುತ್ತಲಿರುವ ದ್ವೀಪಗಳಿಗಾಗಿಯೂ, ದ್ವೀಪಾದೇಶಗಳಿಗಾಗಿಯೂ ಜವಾಬ್ದಾರಿವಹಿಸಿ ಪ್ರಾರ್ಥಿಸಿರಿ. ಹೆಚ್ಚಾಗಿ ಭಾರತೀಯರು ವಾಸವಿರುವ ದೇಶಗಳನ್ನು ಗುರುತಿಸಿಕೊಂಡು ಭಾರತೀಯರಾದ ನೀವು ಜವಾಬ್ದಾರಿವಹಿಸಿ ಪ್ರಾರ್ಥಿಸಿರಿ ಎಂದು ದೇವರು ಹೇಳುತ್ತಾನೆ. (ನುಡಿಯಲ್ಪಟ್ಟ ದಿನ: 19.12.2017 ನಾಲೂಮಾವಡಿ ಮತ್ತು 06.01.2018)

## ಪ್ರಾರ್ಥನಾ ಮನವಿ

01. ದ್ವೀಪಗಳ ಮೇಲೂ ಅದರಲ್ಲಿ ವಾಸವಿರುವ ಜನರ ಮೇಲೂ ಬರಲಿರುವುದರ ಬಗ್ಗೆ ದೇವರು ನುಡಿದಿರುವ ಘೋರಸಂಭವಗಳು ಉಂಟಾಗದಂತೆ ದೇವರು ದ್ವೀಪಗಳನ್ನು ಕಾಯ್ದುಕೊಳ್ಳುವಂತೆಯೂ, ದ್ವೀಪಗಳಲ್ಲಿ ವಾಸಿಸುವವರ ಜೀವಕ್ಕೆ ಆಪತ್ತು ಉಂಟಾಗದಂತೆ ದೇವರು ಅವರನ್ನು ಕಾಯ್ದುಕೊಳ್ಳುವಂತೆಯೂ ಪ್ರಾರ್ಥಿಸಿರಿ.

02. ಲೋಕದಲ್ಲಿನ ಅನೇಕ ದ್ವೀಪಗಳಲ್ಲಿ ಇಂತಹ ಘೋರಸಂಭವಗಳು ಉಂಟಾಗುತ್ತದೆಯೆಂದು ತಿಳಿಸಲ್ಪಟ್ಟಿದ್ದರೂ ಮುಖ್ಯವಾಗಿ ಭಾರತದ ಸುತ್ತಲೂ, ಭಾರತವನ್ನು ಅಂಟಿಕೊಂಡಿರುವ ದ್ವೀಪಗಳಿಗಾಗಿ ಜವಾಬ್ದಾರಿವಹಿಸಿ ಪ್ರಾರ್ಥಿಸಿರಿ. ಅದರಲ್ಲೂ ಭಾರತವನ್ನು ಸೇರಿರುವ ಅಂಡಮಾನ್, ನಿಕೋಬಾರ್ ಮತ್ತು ಲಕ್ಷದ್ವೀಪಗಳಿಗಾಗಿ ಪ್ರಾರ್ಥಿಸಿರಿ.

03. ದ್ವೀಪಗಳಲ್ಲಿ ನಡೆಯುಲಿರುವ ಘೋರಸಂಭಗಳನ್ನೂ, ಅದರಿಂದ ತಪ್ಪಿಸಿಕೊಳ್ಳಲು ಪ್ರಾರ್ಥಿಸಬೇಕಾದ ವಿಧಾನಗಳನ್ನು ದ್ವೀಪಗಳಲ್ಲಿ ಇರುವವರಿಗೆ ತಿಳಿಸುವದಕ್ಕೂ, ಆ ದ್ವೀಪಗಳಿಗಾಗಿ ಜವಾಬ್ದಾರಿವಹಿಸಿ ಪ್ರಾರ್ಥಿಸುವದಕ್ಕೂ ದೇವರು ಸೇವಕರನ್ನು ಎಬ್ಬಿಸಲಿಕ್ಕಾಗುವಂತೆ ಪ್ರಾರ್ಥಿಸಿರಿ.

04. ಭಾರತವನ್ನು ಸೇರಿಕೊಂಡುವ ದ್ವೀಪಗಳು ಮಾತ್ರವಲ್ಲ, ಭಾರತಿಯರು ಹೇರಳವಾಗಿ ವಾಸವಿರುವ ದ್ವೀಪಗಳನ್ನೆಲ್ಲಾ ನೀವು ತಿಳಿದು ಪ್ರಾರ್ಥಿಸಿರಿ. ಮುಖ್ಯವಾಗಿ ಶ್ರೀಲಂಕಾ, ಇಂಡೋನೇಷ್ಯಾ, ಮಾಂರ್ಯ್ಷಾ ಮಾರ್, ಮಲಾದ್ವೀಪಗಳಂತಹವುಗಳನ್ನು ನೆನೆಪುಮಾಡಿಕೊಂಡು ಪ್ರಾರ್ಥಿಸಿರಿ.

05. ಕಾಲಕ್ಕೂ ಮುಂಚಿತವಾಗಿ ದ್ವೀಪಗಳಲ್ಲಿ ನಾಶನಗಳು, ಆಪತ್ತುಗಳು ಉಂಟಾಗಿ ಜನರನ್ನು ನಾಶಗೊಳಿಸುವದಕ್ಕಾಗಿ ಅವರನ್ನು ಪಾಪದೊಳಕ್ಕೂ, ಉದಾಸೀನತೆಯೊಳಕ್ಕೂ, ಬೀಳುವಂತೆ ಮಾಡುವಂತ ಇಂತಹ ಎಲ್ಲಾ ದುಷ್ಟಾತ್ಮಗಳ ಕ್ರೀಯೆಗಳು ಕಟ್ಟಿಹಾಕುವಂತೆಯೂ, ದ್ವೀಪಗಳಲ್ಲಿ ದೇವರ ಮಾತುಗಳು ಹೆಚ್ಚಿನಾಂಶ ಸಾರಲ್ಪಡಲಿಕ್ಕಾಗುವಂತೆಯೂ ದೇವರು ಬಾಗಿಲು ತೆರೆಯುವಂತೆ ಪ್ರಾರ್ಥಿಸಿರಿ.